Total No. of Questions : 61 ]

Total No. of Printed Pages : 4 ]

**Code No. 16**

**June/July, 2011**

# OPTIONAL KANNADA

Time : 3 Hours 15 Minutes ] [ Max. Marks : 100

***ಸೂಚನೆ :*** i) ಪ್ರಶ್ನೆಗಳ ಸಂಖ್ಯೆಗಳನ್ನು ಉತ್ತರ ಪತ್ರಿಕೆಯ ಎಡ ಭಾಗದಲ್ಲಿ ಬರೆಯಿರಿ.

ii) ಪ್ರತಿ ವಿಭಾಗದಲ್ಲಿರುವ ಸೂಚನೆಗಳಿಗೆ ಅನುಗುಣವಾಗಿ ಉತ್ತರಿಸಿ.

## ಭಾಗ – I

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ : $7 \times 1 = 7$

1) ಅಗ್ನಿದೇವನಿಗೆ ಖಾಂಡವ ವನವನ್ನು ದಾನವಾಗಿ ನೀಡಿದವರು ಯಾರು ?

2) ಸಾಮವೇದಿಗಳು ಎಷ್ಟು ಜನ ಶಿಷ್ಯಂದಿರನ್ನು ಹೊಂದಿದ್ದರು ?

3) ಪಾರ್ಥ ಊರ್ವಶಿಯನ್ನು ಯಾವ ಶಬ್ದಗಳಿಂದ ಸ್ವಾಗತಿಸಿದ ?

4) ಅರಸನ ಕರ್ತವ್ಯವೇನು ?

5) ಭರತೇಶನು ಅರಸಿಯರಿಂದ ಯಾವ ಯಾವ ಕಾಣಿಕೆಗಳನ್ನು ಪಡೆದನು ?

6) ಪರೀಕ್ಷೆ ಮುಗಿದ ಮೇಲೆ ದೇವೇಂದ್ರ ಊರಿಗೆ ಹೇಗೆ ಹೊರಟನು ?

7) ಉಮ್ಮತ್ತೂರಿನ ಪ್ರಭು ಯಾರೊಂದಿಗೆ ಯುದ್ಧ ಮಾಡಿ ಶರಣಾದನು ?

II. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರಕ್ಕೆ ಹತ್ತರಿಂದ ಹದಿನೈದು ಪದಗಳಲ್ಲಿ ಉತ್ತರಿಸಿ : $3 \times 2 = 6$

8) ಮಾವಿನ ಮರವನ್ನು ಪಂಪ ಕವಿಯು ಹೇಗೆ ವರ್ಣಿಸಿದ್ದಾನೆ ?

9) ಶಿವನು ಸಾಮವೇದಿಗಳ ಕನಸಿನಲ್ಲಿ ಕಾಣಿಸಿಕೊಂಡು ನುಡಿದದ್ದೇನು ?

10) ಅರ್ಜುನನು ರಥ ಹತ್ತುವಾಗ ಹೋಗಿಬರುತ್ತೇನೆಂದು ಯಾರಿಗೆ ಹೇಳಿದನು ?

11) ಮೇಟಿ ವಿದ್ಯೆಯ ಮಹತ್ವಕ್ಕೆ ಕಾರಣವೇನು ?

12) ಉದಯ ಕಾಲದಲ್ಲಿ ಭರತನು ಹೇಗೆ ಶೋಭಿಸುತ್ತಿದ್ದನು ?

III. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಮೂವತ್ತರಿಂದ ನಲವತ್ತು ಪದಗಳಲ್ಲಿ ಉತ್ತರಿಸಿ : $2 \times 3 = 6$

13) ಪಂಪನು ಬಣ್ಣಿಸಿರುವ ನಂದನವನದ ಚೆಲುವನ್ನು ವಿವರಿಸಿ.

14) ಶ್ವಪಚ ದೇವರು ಶಿವನನ್ನು ಅರ್ಚಿಸುತ್ತಿದ್ದ ಬಗೆ ಯಾವುದು ?

[ Turn over

15) ತೃಣವೇ ಪರ್ವತವಾಗುವುದು ಎಂದರೇನು ?

16) ಆಸ್ಥಾನದಲ್ಲಿ ಗಾಯಕಿಯರು ಯಾವ ರೀತಿ ಹಾಡಿದರು ?

IV. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡಕ್ಕೆ ನಲವತ್ತರಿಂದ ಅರವತ್ತು ಪದಗಳಲ್ಲಿ ಉತ್ತರಿಸಿ : $2 \times 5 = 10$

17) ನಂದನವನದಲ್ಲಿ ಸ್ತ್ರೀಯರು ಪ್ರಕೃತಿಯ ಬಳಿ ಏನೆಂದು ಕ್ಷಮೆ ಕೇಳಿದರು ?

18) ಸಾಮವೇದಿಗಳ ಪಾಂಡಿತ್ಯ ಪ್ರಭಾವಗಳನ್ನು ಹರಿಹರನು ಹೇಗೆ ವರ್ಣಿಸಿದ್ದಾನೆ ?

19) ಖಾಂಡವ ವನದ ಕಾವಲು ವ್ಯವಸ್ಥೆಯನ್ನು ಪಂಪನು ವರ್ಣಿಸಿದ ಬಗೆಯನ್ನು ವಿವರಿಸಿ.

20) ಊರ್ವಶಿಯ ರೋಷದ ವರ್ಣನೆಯನ್ನು ಕವಿ ಹೇಗೆ ಚಿತ್ರಿಸಿದ್ದಾನೆ ?

V. ಕೆಳಗಿನ ಪದ್ಯಗಳಲ್ಲಿ ಎರಡರ ಸಂದರ್ಭ ಸೂಚಿಸಿ ಮಹತ್ವವನ್ನು ತಿಳಿಸಿ : $2 \times 3 = 6$

21) ಉರಿ ಕೊಳೆ ದೆಸೆಗಾಣದೆ ದೆಸೆ
ವರಿವರಿದು ಕುಜಂಗಳಂ ಪಡಲ್ವಡಿಸಿ ಭಯಂ!
ಬೆರೆಸೋಜೆ ನೆಗೆದುದಾವನ
ಕರಿ ಶರಭ ಕಿಶೋರ ಕಂಠ ಗರ್ಜನೆ ಬನದೊಳ್॥

22) ಉಡುರಾಜಂ ಕಳೆಗುಂದಿ ಪೆರ್ಚದಿಹನೇ ನ್ಯಗ್ರೋಧ ಬೀಜಂ ಕೆಲಂ।
ಸಿಡಿದುಂ ಪೆರ್ಮರನಾಗದೇ ಎಳೆಗರುಂ ಎತ್ತಾಗದೇ ಲೋಕದೊಳ್॥
ಮಿಡಿ ಪಣ್ಣಾಗದೆ ದೈವದೊಲ್ಮೆಯಿರಲಾ ಕಾಲಾನುಕಾಲಕ್ಕೆ ತಾಂ।
ಬಡವಂ ಬಲ್ಲಿದನಾಗನೇ ಹರಹರಾ ಶ್ರೀಚೆನ್ನಸೋಮೇಶ್ವರಾ॥

23) ಚಿತ್ತವಿಲ್ಲದೆ ಗುಡಿ ಸುತ್ತಿದಡೆ ಫಲವೇನು
ಎತ್ತು ಗಾಣವನು ಹೊತ್ತು ತಾ
ನಿತ್ಯದಿ ಸುತ್ತಿ ಬಂದಂತೆ ಸರ್ವಜ್ಞ.

VI. ಕೆಳಗಿನ ಸಾಲುಗಳಲ್ಲಿ ಎರಡರ ಸಂದರ್ಭವನ್ನು ಸೂಚಿಸಿ ಮಹತ್ವವನ್ನು ವಿವರಿಸಿ : $2 \times 2 = 4$

24) ಕಾಮವುಂಟೇ ಮರಕೆ ಕ್ರೋಧವುಂಟೇ ಲತೆಗೆ.

25) ಭೋಗದಲಿ ಭಾರತ ವರುಷ ನಿಮ್ಮದು ಪುಣ್ಯಭೂಮಿ ಕಣ.

26) ಕೆಲವಂ ಬಲ್ಲವರಿಂದ ಕಲ್ತು.

27) ನೋಡಿ ಬಾ ತಂಗಿ ಎಚ್ಚರಿಕೆ ಅಕ್ಕಾಜಿ ಕೈ ನೀಡಕ್ಕ.

## ಭಾಗ – II

VII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡಕ್ಕೆ ನಲವತ್ತರಿಂದ ಅರವತ್ತು ಪದಗಳಲ್ಲಿ ಉತ್ತರಿಸಿ : $2 \times 5 = 10$

28) ದೇವೇಂದ್ರ ಯಾರು ? ಪರೀಕ್ಷೆಯ ನಡುವೆಯೂ ಊರಿಗೆ ಬರಲು ಉಂಟಾದ ಕಾರಣವೇನು ?

29) ದೇವೇಂದ್ರನ ಹಿರಿಯಣ್ಣನ ಸ್ವಭಾವವನ್ನು ಪರಿಚಯಿಸಿ.

30) ದೇವೇಂದ್ರ ಊರಿಗೆ ಬಂದಾಗ ಅವನ ತಾಯಿ ಹಾಗೂ ಇತರರ ಪ್ರತಿಕ್ರಿಯೆಗಳನ್ನು ಸಂಗ್ರಹಿಸಿ.

VIII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಒಂದಕ್ಕೆ ಅರವತ್ತರಿಂದ ಎಂಬತ್ತು ಪದಗಳಲ್ಲಿ ಪ್ರಬಂಧ ಬರೆಯಿರಿ : $1 \times 10 = 10$

31) ದೇವೇಂದ್ರ ಊರಿಗೆ ಹೊರಡುವ ಸಮಯದಲ್ಲಿ ದಾರಿಯಲ್ಲಿ ಎದುರಾದ ಮಳೆಯಿಂದ ಒದಗಿದ ಅನಾನುಕೂಲತೆಗಳನ್ನು ಪರಿಚಯಿಸಿ.

32) ಗಿಲ್ ಯಾರು ? ದೇವೇಂದ್ರನಿಗೂ ಅವನಿಗೂ ಇದ್ದ ಸಂಬಂಧ ಎಂತಹುದು ? ಅವನು ದೇವೇಂದ್ರನಿಗೆ ನಿರೂಪಿಸಿದ ಕಥೆಯನ್ನು ತಿಳಿಸಿ.

## ಭಾಗ – III

IX. ಕೆಳಗಿನ ಸಾಲುಗಳಲ್ಲಿ ಯಾವುದಾದರೂ ಎರಡರ ಸಂದರ್ಭವನ್ನು ಸೂಚಿಸಿ ಮಹತ್ವವನ್ನು ವಿವರಿಸಿ : $2 \times 2 = 4$

33) ಇನ್ ಸಿಡಿಲ್ಗೆ ನೀನ್ ಅಂಬನ್ನ ಹೂಡಬೇಡ ಕಂಡೆಯಾ !

34) ತಿಪ್ಪೆಯಲ್ಲಿ ದೊರೆತ ರತ್ನವೂ ರತ್ನವಲ್ಲದೆ ಉಂಟೆ !

35) ನಾನೊಬ್ಬ ಗಂಡಸಾಗಿ ಹುಟ್ಟಬಾರದಾಗಿದ್ದಿತೆ; ಅಯ್ಯೊ ?

X. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡಕ್ಕೆ ಮೂವತ್ತರಿಂದ ನಲವತ್ತು ಪದಗಳಲ್ಲಿ ಉತ್ತರಿಸಿ : $2 \times 3 = 6$

36) ಪಾಳೆಯಗಾರರು ಕೋಪಾವೇಶಕ್ಕೆ ಒಳಗಾಗಲು ಕಾರಣವೇನು ?

37) ನಂಜಶೆಟ್ಟಿ ಮಾದೇವಮ್ಮಣ್ಣಿಯಲ್ಲಿ ಕ್ಷಮೆಯನ್ನು ಹೇಗೆ ಕೋರುತ್ತಾನೆ ?

38) ಪ್ರತಿಪಕ್ಷದ ಪಾಳೆಯಗಾರರು ನಂಜಶೆಟ್ಟಿಗೆ ಆಜ್ಞಾಪಿಸಿದ್ದ ಶಿಕ್ಷೆ ಯಾವುದು ?

XI. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಒಂದಕ್ಕೆ ಅರವತ್ತರಿಂದ ಎಂಬತ್ತು ಪದಗಳಲ್ಲಿ ಪ್ರಬಂಧವನ್ನು ಬರೆಯಿರಿ : $1 \times 10 = 10$

39) ಮೈಸೂರು ಮಹಾರಾಜರ ವ್ಯಕ್ತಿತ್ವವನ್ನು ಪರಿಚಯಿಸಿ.

40) ನಂಜುಂಡೇಶ್ವರ ಜಾತ್ರೆ ರಣರಂಗವಾಗಿ ಪರಿಣಮಿಸಿದ್ದು ಹೇಗೆ ? ವಿವರಿಸಿ.

## ಭಾಗ – IV

XII. ಕೆಳಗಿನ ಪದಗಳಲ್ಲಿ ಯಾವುದಾದರೂ ಎರಡಕ್ಕೆ ಟಿಪ್ಪಣಿ ಬರೆಯಿರಿ : $2 \times 2 = 4$

41) ಚಂಪೂ ಸಾಹಿತ್ಯ

42) ಪಂಚ ಮಹಾಪಾತಕಗಳು

43) ಅಜಮುಖಿ ವ್ಯಾಘ್ರ

XIII. ಕೆಳಗಿನ ಶಬ್ದಗಳಲ್ಲಿ ಯಾವುದಾದರೂ ನಾಲ್ಕರ ಅರ್ಥಗಳನ್ನು ತಿಳಿಸಿ : $4 \times \frac{1}{2} = 2$

44) ಅಲರ್ದ

45) ಕಡುನಾಣ

46) ಮಾಕಂದ

47) ಅಗ್ಗಳ

48) ಅನಿತು

49) ಭೂಪಾಲ

[ Turn over

XIV. ಕೆಳಗಿನ ಶಬ್ದಗಳಲ್ಲಿ ಯಾವುದಾದರೂ ಮೂರು ಪದಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ : 3 × 1 = 3

50) ಅಂಬು

51) ಧರಣಿ

52) ಕುಸುಮ

53) ಪಾವಕ

54) ನೇಸರ

XV. ಕೆಳಗಿನ ನುಡಿಗಟ್ಟುಗಳಲ್ಲಿ ಯಾವುದಾದರೂ ಎರಡನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ : 2 × 1 = 2

55) ನಾಚಿ ನೀರಾಗು

56) ಕತ್ತಿ ಮಸೆ

57) ಓಬಿರಾಯನ ಕಾಲ

58) ನೆತ್ತರು ಕುದಿ

## ಭಾಗ – V

XVI. ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ : 2 × 5 = 10

59) ಈ ಕೆಳಗಿನ ಪದ್ಯಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ತಿಳಿಸಿ :

ಉತ್ತರ ದಿಶಾಭಾಗದೊಳಗೆ ಭಾಸುರವೆನಿಸಿ
ಛತ್ತೀಸ ಪುರವಿರ್ಪವೀ ಧರೆಗೆ ತೊಡವೆನಿಸಿ
ಆ ಪುರಂಗಳೊಳೊಂದು ಪುರದೊಳಿರ್ಪಂ ನೋಡೆ
ಪಾಪರಹಿತಂ ಸಾಮವೇದಿಯೆನಿಪಂ ನೋಡ.

60) ಈ ಕೆಳಗಿನ ಗದ್ಯಭಾಗವನ್ನು ಹೊಸಗನ್ನಡಕ್ಕೆ ಅನುವಾದಿಸಿ :

ಆ ವೃದ್ಧ ಮಾಹೇಶ್ವರನಂ ಗೊಡಗೊಂಡು ಬರ್ಪಾಗಳು ತಾನೆಮ್ಮ ತೊತ್ತಿನ ಮಗಂ ತನ್ನ ಭಾವಮಂ ಮಱಿಡನೆ ಎನ್ನ ಪರಿಯಲ್ಲವನೀಗಳೆ ತೋಱಿಕೊಟ್ಟಪೆಂ ತನ್ನೆರವಿನ ಸಿರಿಯಂ ನಂಬಿ ಎನ್ನ ಮಱಿದಡಾಂ ಬಿಡುವವನಲ್ಲೆಂದು ಕೆಲಬಲದವರ ಕೇಳುವಂತೆ ಗುಜುಗುಜುಗೊಳುತುಂ ಬಂದು ಕುಮಾರನ ಮುಂದೆ ನಿಂದಿರ್ದು ಮಾಣದೆ ಗೊಣಗೊಟ್ಟುತಿರಲ್.

61) ಕೆಳಗೆ ಸೂಚಿಸಿರುವ ಯಾವುದಾದರೂ ಒಂದು ವಸ್ತುವಿನ ಬಗ್ಗೆ ಸ್ವಂತ ಕತೆ / ಕವಿತೆಯನ್ನು ರಚಿಸಿ :

ಅ) ಪ್ರಕೃತಿ

ಆ) ಕನಸು